2-30 P.M.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಎಲ್ಲಾ ಜಿಲ್ಲೆಗಳಿಗೂ ಮಂತ್ರಿಗಳನ್ನು ಕೂಡುವುದು ಸೂಕ್ತವೋ ಅಸೂಕ್ತವೋ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇದು ರಾಜಕೀಯ ಪ್ರಶ್ನೆ.

ಶ್ರೀ ಆರ್. ಎನ್, ನಾಯಕ್.—ನಮಗೆ ಕಾನೂನು ಮಂತ್ರಿಗಳು ಹೇಳಿದರು, ನಿಮ್ಮ ಜಿಲ್ಲೆಗೆ ಮುಖ್ಯ ಮಂತ್ರಿಯವರನ್ನೇ ಕೊಟ್ಟು ಬಿಟ್ಟಿದ್ದೇವೆಂದು, ಮುಖ್ಯ ಮಂತ್ರಿಗಳು ಹೋಗಿ ಬಂದ ಮೇಲೆ ಅಲ್ಲಿ ಜಿಲ್ಲಾ ಕೆಲಸ ಆಗಿಬಿಡುತ್ತವೆಂದು ಅವರ ಭಾವನೆ. ನನ್ನ ತೀರ್ಮಾನ, ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ ಅವರ ಮನೆಗೂ ಅಥವಾ ದೇವಸ್ಥಾನಕ್ಕೋ ಹೋಗುತ್ತಾರೆ ಆದರಿಂದ ನಮ್ಮ ಸಮಸ್ಯೆಗಳು ಇತ್ಯರ್ಥವಾಗುವುದಿಲ್ಲ. ಎಲ್ಲಾ ಖಾತೆಯ ಮಂತ್ರಿಯವರು ಎಲ್ಲಾ ಜಿಲ್ಲೆಗಳಿಗೂ ಹೋಗಿ ಅವರವರ ಕೆಲಸ ಮಾಡಬೇಕಾಗುತ್ತದೆ. ಎಲ್ಲಾ ಸಮಸ್ಯೆಗಳನ್ನೂ ಮುಖ್ಯ ಮಂತ್ರಿಯವರೇ ಇತ್ಯರ್ಥಪಡಿಸುವ ಹಾಗಿದ್ದರೆ ಉಳಿದ ಮಂತ್ರಿಗಳ ಅವಶ್ಯಕತೆ ಏಕಿತ್ತು ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಈ ಸರ್ಕಾರದ ಎಲ್ಲಾ ಇಲಾಖೆಗಳ ಮೇಲೆ ಉಸ್ತುವಾರಿಯ ಜವಾಬ್ದಾರಿಯನ್ನು ಹೊತ್ತಿರುತ್ತಾರೆ ಆಡಳಿತದಲ್ಲಿ ಇರುವ ಲೋಪ ದೋಷಗಳನ್ನು ಅವರ ಗಮನಕ್ಕೆ ತಂದರೆ ಅವರೂ ಸಾಧ್ಯವಾದಮಟ್ಟಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಮ್ಮ ಜಿಲ್ಲೆಯಲ್ಲಿ ರೇಡಿಯೋ ಸ್ಟೇಷನ್ ಇಲ್ಲ. ವಿಮಾನ ನಿಲ್ದಾಣ ಇಲ್ಲ. ಮಂತ್ರಿಗಳು ಬಂದರೆ ಕಾರಿನಲ್ಲಿ ಇಳಿದು ದೂರಕ್ಕೆ ನಡೆಯಬೇಕಾಗುತ್ತದೆಂದು ನಮ್ಮ ಜಿಲ್ಲೆಗಳ ಕಡೆಗೇ ಬರುವುದಿಲ್ಲವೆಂದು ನನ್ನ ಭಾವನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಆರ್. ಎನ್. ನಾಯಕ್‌ರವರ ಜಿಲ್ಲೆ ಸೊಬಗಿನ ಬೀಡು. ಎಲ್ಲರೂ ಅಲ್ಲಿಗೇ ಹೋಗುವುದಕ್ಕೆ ಇಷ್ಟಪಡುತ್ತಾರೆ. ನಾನು ಸಹ ಅಲ್ಲಿಯೇ ಮನೆ ಕಟ್ಟಿಕೊಂಡು ಹೋಗೋಣವೆಂದು ಅನಿಸುತ್ತಿದೆ. ಆದರೆ ನಾಯಕ್‌ರವರು ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ಎನ್ ನಾಯಕ್.—ಪ್ರಕೃತಿ ಸೊಬಗಿನಿಂದ ಹೊಟ್ಟೆ ತುಂಬುವುದಿಲ್ಲ.

ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ 1615. 38ನೇ ಪಟ್ಟಿ

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಪರಿಶೀಲನಾ ಸಮಿತಿಯವರಿಂದ ಪರಿಶೀಲಿಸಿ ಈ ನೌಕರರ ವಿದ್ಯಾರ್ಹತೆ ಮತ್ತು ಯೋಗ್ಯತೆಗಳನ್ನು ಪರಿಶೀಲಿಸಿದ ನಂತರ ಅವರು ನೀಡಿದ ಶಿಫಾರಸ್ಸಿನ ಮೇಲೆ ಇವರನ್ನು ತೆಗೆದುಕೊಳ್ಳಲಾಯಿತು.

ಶ್ರೀ ಜಿ. ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ನೌಕರರ ಸೇವಾ ನಿಯಮಗಳನ್ನು ಪರಿಶೀಲಿಸುವಾಗ, ಪರಿಶೀಲನಾ ಸಮಿತಿಯು ಯಾವ ಪರತ್ತು ಮತ್ತು ನಿಬಂಧನೆಗಳ ಮೂಲಕ ಪರಿಶೀಲಿಸಿದೆ ? ಕಟ್ಟುನಿಟ್ಟಾಗಿ ನಿಯಮಗಳನ್ನು ಪರಿಶೀಲಿಸಿವೆಯೇ ಹೇಗೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪರಿಶೀಲನಾ ಸಮಿತಿಯವರು ಮುಖ್ಯವಾಗಿ ವಿದ್ಯಾರ್ಹತೆ ಮತ್ತು ಅವರ ಒಂದು ಅನುಭವದ ಆಧಾರದ ಮೇಲೆ ಅವರ ಒಂದು ಶಿಫಾರಸ್ಸನ್ನು ಮಾಡಿದ್ದಾರೆ. ಅವರ ಶಿಫಾರಸ್ಸನ್ನು ಸರ್ಕಾರ ಒಪ್ಪಿಕೊಂಡಿದೆಯೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಕೇಳಿದ ಪರತ್ತುಗಳು ಹಾಗು ನಿಬಂಧನೆಗಳು ಯಾವುವು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದಸ್ಯರಿಗೆ ನಂತರ ಆ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಈ ಉತ್ತರಕ್ಕೆ ಯೋಗ್ಯತೆ, ಅನುಭವವನ್ನು ಪರಿಶೀಲನೆ ಮಾಡಿ ಸಮಿತಿಯವರು ಏನು ಒಂದು ರಿಪೋರ್ಟ್ ಕೊಟ್ಟಿದ್ದಾರೆ ಅದನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ತಿಳಿಸಿದರು. ಆದರಲ್ಲಿ ಏನಾದರೂ ಬೇರೆಯವರಿಗೆ ಅನ್ಯಾಯವಾಗುವ ರೀತಿಯಲ್ಲಿ ರಿಪೋರ್ಟ್ ಕೊಟ್ಟಿದ್ದಾರೆ ಅದನ್ನು ಸರಿಪಡಿಸುತ್ತೀರಾ ಹೇಗೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆರೀತಿ ಸ್ಪೆಸಿಫಿಕ್ ಆಗಿ ತೊಂದರೆಯಾದುದನ್ನು ತಾವು ನನ್ನ ಗಮನಕ್ಕೆ ತಂದರೆ ನಾನು ಅದರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಈಗಾಗಲೇ ಅಂತಹ ಅನ್ಯಾಯವಾದಂತ ಒಬ್ಬ ವ್ಯಕ್ತಿ ತಮ್ಮ ಸರ್ಕಾರದ ವಿರುದ್ಧ ಅರ್ಜಿಯನ್ನು ಸಲ್ಲಿಸಿದ್ದಾಗಿದೆ. An honarary Professor, before his

absorptiou by the institute has been given promotion, even though the court has decided that it cannot be given. Part-time work can not be taken as permanent work.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದನ್ನು ಸೂಕ್ತವಾಗಿ ಪರಿಶೀಲಿಸಿ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಆನರರಿಯಾಗಿ ಕೆಲಸ ಮಾಡುತ್ತಿದ್ದಂತಹವರಿಗೆ ಪ್ರಮೋಷನ್ ಕೊಟ್ಟಿದ್ದೀರಿ, ಖಾಯಮ್ ಆದವರಿಗೆ ಕೊಟ್ಟಿಲ್ಲ. ಸಮಿತಿಯವರು ಇದನ್ನು ಪರಿಶೀಲನೆ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಅನ್ಯಾಯವಾಗಿರುವವರಿಗೆ ತಕ್ಷಣ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಇವತ್ತು ತಾನೇ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಇವರು ಹೇಳಿರತಕ್ಕಂತ ವಿಷಯದಲ್ಲಿ ನನಗೆ ಅನೇಕ ದೂರುಗಳು ಈ ಹಿಂದೆಯೇ ಬಂದಿದ್ದವು. ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಕೊಡುವುದಾದರೆ ಅದರ ಬಗ್ಗೆ ಪೂರ್ಣ ವಿಚಾರಣೆ ನಡೆಸಿ ಅಕ್ರಮವಾಗಿ ಪ್ರಮೋಷನ್ ಕೊಟ್ಟಿದ್ದರೆ ಅದನ್ನು ನಿಲ್ಲಿಸುತ್ತೇನೆ.

ಪ್ರಶ್ನೆ ಸಂಖ್ಯೆ 1561 (563)

ಶ್ರೀ ಸೂರ್ಯನಾರಾಯಣರಾವ್.—ನಾನು ಮುಂದುವರಿದ ಪ್ರಶ್ನೆ ಬಗ್ಗೆ ಕೇಳುತ್ತಿದ್ದೇನೆ ಸ್ವಾಮಿ,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಸದಸ್ಯರು ಕೇಳಿರತಕ್ಕಂತ ಪ್ರಶ್ನೆ ಬಹಳ ಮಹತ್ವದ್ದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತೊಂದಷ್ಟು ಕಾಲವಕಾಶವನ್ನು ಕೇಳುತ್ತಿದ್ದೇನೆ. ಪ್ರಶ್ನೆಯನ್ನು ತಡೆಹಿಡಿಯಲಾಗಿದೆ).

ಅಲ್ಪಕಾಲಾವಧಿ ಪ್ರಶ್ನೆ

ವಿಷಯ.—ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ದಾನಶುಲ್ಕ ಪಡೆದಿರುವ ಬಗ್ಗೆ

ಪ್ರ. ಸಂಖ್ಯೆ 3(22) ಶ್ರೀ ಎಂ. ಎಸ್ ಕೃಷ್ಣನ್ (ರಾಜಾಜಿನಗರ) ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ದಾವಣಗೆರೆ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿಯ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ರೂ. 2 ಲಕ್ಷ ಮತ್ತು ಇತರೆಯವರಿಂದ ರೂ. 5 ಲಕ್ಷ ಪಡೆದಿರುವುದು ನಿಜವೆ ?

(ಆ) ಈ ಸಂಬಂಧದಲ್ಲಿ ಸರ್ಕಾರದಿಂದ ಆದೇಶವಾಗಲಿ, ಪ್ರಕಟಣೆಯಾಗಲಿ ಹೊರಡಿಸಿರುವೆ ;

(ಇ) ಈ ರೀತಿಯ ಭ್ರಷ್ಟಾಚಾರವನ್ನು ತಡೆಗಟ್ಟಲು ಸರ್ಕಾರದರು ಕೈಗೊಂಡಿರುವ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).

(ಅ) ಸ್ನಾತಕೋತ್ತರ ಪದವಿಯ ಸ್ಥಾನಕ್ಕೆ ಸರ್ಕಾರವು ಯಾವುದೇ ರೀತಿಯ ದಾನ (ಕ್ಯಾಪಿಟೇಷನ್) ಶುಲ್ಕವನ್ನು ನಿಗಧಿಗೊಳಿಸಿರುವುದಿಲ್ಲ.

(ಆ) ಈ ಸಂಬಂಧದಲ್ಲಿ ಯಾವುದೇ ಆದೇಶ ಅಥವಾ ಪ್ರಕಟಣೆ ಹೊರಡಿಸಿಲ್ಲ.

(ಇ) ಪರಿಶಿಷ್ಟ ಜಾತಿಯವರಿಂದ ಮತ್ತು ಇತರೆಯವರಿಂದ 2 ಲಕ್ಷ ಮತ್ತು 5 ಲಕ್ಷ ರೂಪಾಯಿಗಳ ಕ್ಯಾಪಿಟೇಷನ್ ಶುಲ್ಕ ಪಡೆದಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರುಗಳು ಬಂದಿರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—3(22)ನೇ ಪ್ರಶ್ನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಯಾವುದೇ ರೀತಿಯಲ್ಲೂ ಕ್ಯಾಪಿಟೇಷನ್ ಶುಲ್ಕವನ್ನು ಸರ್ಕಾರದವರು ನಿಗದಿ ಮಾಡಿಲ್ಲ. ಈ ಸಂಬಂಧದಲ್ಲಿ ಯಾವುದೇ ಆದೇಶ, ಪ್ರಕಟಣೆ ಹೊರಡಿಸಿಲ್ಲ ಪರಿಶಿಷ್ಟ ಜಾತಿಯವರಿಂದ ಮತ್ತು ಮತ್ತಿತರಿಂದ 2 ಲಕ್ಷ 5 ಲಕ್ಷ ರೂಪಾಯಿಗಳನ್ನು ಪಡೆದಿರುವ ಬಗ್ಗೆ ಯಾವುದೇ ದೂರುಗಳು ನಮಗೆ ಬಂದಿಲ್ಲ. ಕೆಲವು ಕಡೆ ಅಕ್ರಮವಾಗಿ ಹಣವನ್ನು ಸಂಗ್ರಹಣೆ ಮಾಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ನಾನು ಅಧಿಕಾರಿಗಳಿಗೆ ಇದರ ಬಗ್ಗೆ ತಿಳಿಸಿದ್ದೇನೆ. ಇದಕ್ಕೆ ಇವರು ಏನಾದರೂ ತಿಳಿಸುವುದಾದಲ್ಲಿ ತಿಳಿಸಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಮೊದಲನೇ ಪ್ರಶ್ನೆಗೂ ಈ ಉತ್ತರಕ್ಕೂ ನೇರವಾಗಿ ಸಂಬಂಧವೇ ಇಲ್ಲ. ಮೊದಲನೆಯದಾಗಿ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ನಿಗಧಿ ಮಾಡಿಲ್ಲವೆಂದು ಹೇಳಿದ್ದೀರಿ. ಸರ್ಕಾರ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಿದೆ. ತೆಗೆದು